**ಮಂಡ್ಯ ಜಿಲ್ಲಾ ಪೊಲೀಸ್**

## -: ಪತ್ರಿಕಾ ಪ್ರಕಟಣೆ :-

### ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸರ ಕಾರ್ಯಾಚರಣೆ ಬೆಂ-ಮೈ ಎಕ್ಸ್‌ಪ್ರೆಸ್ ವೇ ನಲ್ಲಿ ಸುಲಿಗೆ ಮಾಡುತ್ತಿದ್ದ ಇಬ್ಬರು ಸುಲಿಗೆಕೋರರ ಬಂಧನ, 92 ಗ್ರಾಂ ಚಿನ್ನ, ಒಂದು ಡಿಯೋ ಬೈಕ್, ಎರಡು ಡ್ರ್ಯಾಗನ್‌ಗಳನ್ನು ವಶಪಡಿಸಿಕೊಂಡಿರುವ ಬಗ್ಗೆ

ದಿನಾಂಕ:-13-08-2023 ರಂದು ಪಿರ್ಯಾದಿರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣಾ ವ್ಯಾಪ್ತಿಯ ನಗುವಿನಹಳ್ಳಿ ಗೇಟ್ ಬಳಿಯ ಮೈಸೂರು-ಬೆಂಗಳೂರು ಸರ್ವೀಸ್ ರಸ್ತೆಯಲ್ಲಿ ಕಾರನ್ನು ರಸ್ತೆ ಪಕ್ಕ ನಿಲ್ಲಿಸಿ ಮಲಗಿದ್ದಾಗ ರಾತ್ರಿ 12-30 ಗಂಟೆ ಸಮಯದಲ್ಲಿ ಬೈಕಿನಲ್ಲಿ ಬಂದ ಇಬ್ಬರು ಅಸಾಮಿಗಳು ತಲೆಗೆ ಹೆಲ್ಮೆಟ್ ಹಾಕಿಕೊಂಡು ಬಂದು ನಾವು ಪೊಲೀಸ್ ಎಂದು ಹೇಳಿ ನಮ್ಮನ್ನು ಎದ್ದೇಳಿಸಿ ಚಾಕುವಿನಿಂದ ಹೆದರಿಸಿ ನನ್ನ ಮತ್ತು ನನ್ನ ಪತ್ನಿ ಮೈಮೇಲಿದ್ದ ಇದ್ದ ಚಿನ್ನದ ಒಡವೆಗಳನ್ನು ಕಿತ್ತುಕೊಂಡು ಹೋಗಿರುವುದಾಗಿ ನೀಡಿದ ದೂರಿನ ಮೇರೆಗೆ ಠಾಣಾ ಮೊ.ನಂ 157/2023 ಕಲಂ 397 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಈ ಮೇಲ್ಕಂಡ ಪ್ರಕರಣದ ಆರೋಪಿಗಳು ಮತ್ತು ಮಾಲು ಪತ್ತೆ ಸಂಬಂಧ ಮಾನ್ಯ ಎಸ್.ಪಿ ಮಂಡ್ಯ ರವರು ಶ್ರೀರಂಗಪಟ್ಟಣ(ಗ್ರಾ) ಮತ್ತು ಟೌನ್ ಹಾಗೂ ಪಾಂಡವಪುರ ಪಿಐ , ಪಿಎಸ್ಐ ಮತ್ತು ಸಿಬ್ಬಂದಿಗಳನ್ನೊಳಗೊಂಡತೆ ತಂಡವನ್ನು ರಚನೆ ಮಾಡಿದ್ದು. ಸದರಿ ತಂಡವು ಇಬ್ಬರು ಆರೋಪಿಗಳನ್ನು ಪತ್ತೆ ಮಾಡಿ ಈ ಕೆಳಕಂಡ ಪ್ರಕರಣಗಳು ಮತ್ತು ಮಾಲನ್ನು ಪತ್ತೆ ಮಾಡಿದ್ದು.

### ಪತ್ತೆಯಾದ ಪ್ರಕರಣಗಳ ವಿವರ:-

1) ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ- 157/2023 ಕಲಂ 397 ಐ.ಪಿ.ಸಿ
2) ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ- 158/2023 ಕಲಂ 397 ಐ.ಪಿ.ಸಿ
3) ಮದ್ದೂರು ಪೊಲೀಸ್ ಠಾಣಾ ಮೊ.ನಂ- 217/2023 ಕಲಂ 394 ಐ.ಪಿ.ಸಿ
4) ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣಾ ಮೊ.ನಂ- 192/2023 ಕಲಂ 392 ಐ.ಪಿ.ಸಿ

ಈ ಮೇಲ್ಕಂಡ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಸುಲಿಗೆ ಮಾಡಿದ್ದ 92 ಗ್ರಾಂ ಚಿನ್ನ, 1 ಡಿಯೊ ಬೈಕ್ , 02 ಹೆಲ್ಮೆಟ್ ಹಾಗೂ 02 ಡ್ಯಾಗರ್ ಗಳನ್ನು ವಶಪಡಿಸಿಕೊಂಡಿರುತ್ತೆ .

ಮೇಲ್ಕಂಡ ಪ್ರಕರಣಗಳಲ್ಲಿ ಆರೋಪಿಗಳು ಮತ್ತು ಮಾಲನ್ನು ವಶಪಡಿಸಿಕೊಳ್ಳಲು ಶ್ರಮಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ತಂಡವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಯತೀಶ್.ಎನ್, ಐ.ಪಿ.ಎಸ್ ರವರು ಪ್ರಶಂಸಿಸಿರುತ್ತಾರೆ.

